**ಸಿ. ಸಿ. ನಂ. 4408/2023**

**ಪಿ ಡಬ್ಲ್ಯೂ: 1**

**ಸಾಕ್ಷಿಯು ದಿನಾಂಕಃ** 04-07-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಆರೋಪಿ ಪರ ಶ್ರೀ ಎಸ್ ಕೆ ಡಿ ಆರ್., ವಕೀಲರಿಂದ**

ಕ್ರೆಡಿಟ್ ಆಧಾರದ ಮೇಲೆ ಬಂಗಾರ ಮಾರಾಟ ಆದರೆ ಒಂದು ಇನ್ ವಾಯಸ್ ಮತ್ತು ಕ್ರೆಡಿಟ್ ಬಿಲ್ ಇರುತ್ತವೆ ಅಂದರೆ ಸರಿ. ಇನ್ ವಾಯಸ್ ನಲ್ಲಿ ಪಾವತಿಯಾಗಿರುವುದು ನಗದು ರೂಪದಲ್ಲಿಯೋ, ಚೆಕ್ ಮೂಲಕವೋ ಅಥವಾ ಕ್ರೆಡಿಟ್ ಆಧಾರದ ಮೇಲೆಯೋ ಎಂದು ನಮೂದು ಮಾಡಲಾಗುತ್ತದೆ ಅಂದರೆ ಸರಿ. ಇನ್ ವಾಯಸ್ ನಲ್ಲಿ ಖರೀದಿದಾರರ ವಿಳಾಸವನ್ನು ಸಹ ಬರೆಯಲಾಗುತ್ತದೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಎಲ್ಲಾ ಇನ್ ವಾಯಸ್ ಗಳಲ್ಲಿ ಬರೆಯುವ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿಃ 6 ರಲ್ಲಿ ಖರೀದಿದಾರರ ವಿಳಾಸವನ್ನು ತೋರಿಸಲಾಗಿದೆ ಅಂದರೆ ಸರಿ. ಕ್ರೆಡಿಟ್ ಆಧಾರದ ಮೇಲೆ ಒಡವೆಗಳನ್ನು ಮಾರಾಟ ಮಾಡಿದಾಗ ಆ ಬಗ್ಗೆ ನಮ್ಮ ಲೆಕ್ಕ ಪುಸ್ತಕಗಳಲ್ಲಿ ನಮೂದು ಮಾಡುವುದಿಲ್ಲ. ಸಾಕ್ಷಿ ಮುಂದುವರೆದು ಅಂತಹ ವ್ಯವಹಾರಕ್ಕೆ ಸಂಬಂಧಿಸಿ ಚೆಕ್ ನ್ನು ಪಡೆಯಾಲಾಗುತ್ತದೆ ಎಂದು ನುಡಿಯುತ್ತಾರೆ.

ನನ್ನ ತಾಯಿ ವಿದ್ಯಾವಂತೆ ಅಲ್ಲ. ನಿಪಿಃ 6 ರ ಮೊತ್ತವನ್ನು ಇಷ್ಟು ದಿನಗಳಲ್ಲಿ ಕಟ್ಟಬೇಕು ಎಂದು ಕರಾರು ಆಗಿಲ್ಲ. ಸಾಕ್ಷಿ ಮುಂದುವರೆದು ಪೋಸ್ಟ ಡೇಟೆಡ್ ಚೆಕ್ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ನಿಪಿಃ 6 ರ ವ್ಯವಹಾರವನ್ನೇ ಮೊದಲ ಬಾರಿಗೆ ನಮ್ಮ ಅಂಗಡಿಯಲ್ಲಿ ಮಾಡಿರುತ್ತಾರೆ.

ನಮ್ಮ ಅಂಗಡಿಯಲ್ಲಿ ಇದೇ ಆರೋಪಿಯ ಮೊದಲ ವ್ಯವಹಾರವೇ ಎಂಬ ಪ್ರಶ್ನೆಗೆ ಸಾಕ್ಷಿ ನನ್ನೊಂದಿಗೆ ವ್ಯವಹರಿಸಿದ್ದು ಮತ್ತು ನನಗೆ ಚೆಕ್ ಕೊಟ್ಟಿದ್ದು ಇದೇ ಮೊದಲ ಬಾರಿಗೆ ಎಂದು ನುಡಿಯುತ್ತಾರೆ. ನಾನು ಸದರಿ ಅಂಗಡಿಯಲ್ಲಿ 2018 ರಿಂದ ವ್ಯವಹಾರ ಮಾಡುತ್ತಿದ್ದೇನೆ.

ನಿಪಿಃ 6 ರಲ್ಲಾಗಲಿ, ನೋಟಿಸ್ ನಲ್ಲಾಗಲಿ ಅಥವಾ ದೂರಿನಲ್ಲಾಗಲಿ ಆರೋಪಿ ಎಷ್ಟು ತೂಕದ ಆಭರಣಗಳನ್ನು ಮತ್ತು ಯಾವ ರೀತಿ ಆಭರಣಗಳನ್ನು ಖರೀದಿಸಿರುತ್ತಾರೆ ಎಂದು ವಿವರಿಸಿರುವುದಿಲ್ಲ ಅಂದರೆ ಸರಿ. ಈ ಪ್ರಕರಣದ ವ್ಯವಹಾರವನ್ನು ಹೊರತುಪಡಿಸಿ ಆರೋಪಿಯೊಂದಿಗೆ ನನ್ನ ತಂದೆ ತಾಯಿ ಬಂಗಾರದ ವ್ಯವಹಾರವನ್ನು ಹೊಂದಿರುವುದಿಲ್ಲ. ಕ್ರೆಡಿಟ್ ಆಧಾರದ ಮೇಲೆ 2018 ರ ನಂತರ ಯಾವುದೇ ವ್ಯವಹಾರ ಆದರೂ ನನ್ನ ಗಮನಕ್ಕೆ ಬಂದಿರುತ್ತದೆ ಅಂದರೆ ಸರಿ. ಸದರಿ ವ್ಯವಹಾರ ಆಗಿತ್ತು ಎನ್ನಲಾದ ದಿನದಂದು ಅಂಗಡಿಯಲ್ಲಿ ನನ್ನ ಕುಟುಂಬದವರು ಇದ್ದರೋ ಇಲ್ಲವೋ ಎಂದು ನನಗೆ ಹೇಳಲು ಆಗುವುದಿಲ್ಲ. ಅಂಗಡಿಗೆ ಆಭರಣಗಳನ್ನು ಖರೀದಿಸಲು ಆರೋಪಿ ಒಬ್ಬರೇ ಬಂದಿದ್ದರು. ಆಭರಣಗಳನ್ನು ಕೊಟ್ಟಾಗ ಮತ್ತು ಚೆಕ್ ಪಡೆದಾಗ ನಾನು ಆರೋಪಿಯೊಂದಿಗೆ ನಿಂತು ಫೋಟೋಗಳನ್ನು ತೆಗೆಸಿರುವುದಿಲ್ಲ. ನಿಪಿಃ 6 ರ ಇನ್ ವಾಯಸ್ ನ್ನು ನಾನೇ ತಯಾರಿಸಿರುತ್ತೇನೆ. ಆರೋಪಿಗೆ ಇಷ್ಟು ದೊಡ್ಡ ಮೊತ್ತದ ಆಭರಣಗಳನ್ನು ಮಾರಾಟ ಮಾಡುವುದಕ್ಕೂ ಮೊದಲು ನನ್ನ ತಂದೆ ತಾಯಿಯೊಂದಿಗೆ ಚರ್ಚಿಸಿರುತ್ತೇನೆ.

ಸಿ. ಸಿ. ನಂ. 4408/2023
**ಪಿ ಡಬ್ಲ್ಯೂ: 1**

ಆರೋಪಿ ಯಾವ ವಿಳಾಸದಲ್ಲಿ ವಾಸವಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ ಸದರಿಯವರು ಕೊಟ್ಟೂರು ಸ್ವಾಮಿ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಿದ್ದು, ವಿಳಾಸಗಳನ್ನು ಬದಲಿಸುತ್ತಾ ಇರುತ್ತಾರೆ ಎಂದು ನುಡಿಯುತ್ತಾರೆ. ಚೆಕ್ ನಗದೀಕರಿಸಿಕೊಳ್ಳಲು ಬ್ಯಾಂಕ್ ಗೆ ಹಾಕುವುದಕ್ಕೂ ಮೊದಲು ನಮ್ಮ ಅಂಗಡಿಯಿಂದ ಆರೋಪಿಗೆ ಹಣ ಪಾವತಿ ಮಾಡಿ ಎಂದು ನೋಟಿಸ್ ನೀಡಿರುವುದಿಲ್ಲ. ಚೆಕ್ ಅಮಾನ್ಯಗೊಂಡ ನಂತರ ನೀಡಲಾಗಿರುವ ನೋಟಿಸ್ ಜಾರಿಯಾಗಿರುತ್ತದೆ. ಸದರಿ ನೋಟಿಸ್ ಖುದ್ದಾಗಿ ಜಾರಿಯಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿಃ 4 ರಲ್ಲಿ ಆರೋಪಿಯ ಸಹಿ ಇರುವುದಿಲ್ಲ ಅಂದರೆ ಸರಿ. ನಿಪಿಃ 6 ರಲ್ಲಿ ಕಾಣಿಸಿರುವ ವಿಳಾಸಕ್ಕೆ ನೋಟಿಸ್ ಕಳುಹಿಸಿರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ. ನಿಪಿಃ 6 ರಲ್ಲಿನ ವಿಳಾಸ ಮತ್ತು ನೋಟಿಸ್ ನಲ್ಲಿನ ವಿಳಾಸ ಬೇರೆ ಬೇರೆ ಇರುತ್ತವೆ ಅಂದರೆ ಸರಿಯಲ್ಲ. ಆರೋಪಿಗೆ ನಾನು ಕಳುಹಿಸಿರುವ ನೋಟಿಸ್ ಮುಟ್ಟಿಲ್ಲ ಅಂದರೆ ಸರಿಯಲ್ಲ. ಸದರಿ ನೋಟಿಸ್ ಮುಟ್ಟದ ಕಾರಣವೇ ಅವರಿಗೆ ಉತ್ತರ ನೀಡಲು ಆಗಿಲ್ಲ ಅಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.